**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

# ಓ.ಎಸ್.79/2018

**ಪಿ.ಡಬ್ಲ್ಯೂ - 2**

**ಪ್ರಮಾಣೀಕರಿಸಿದ ದಿನಾಂಕ:03.06.2025**

**ಪಾಟೀ ಸವಾಲು : ಶ್ರೀ.ಎಂ.ಆರ್ ಪ್ರತಿವಾದಿ ನಂ.೪ ಪರ ವಕೀಲರಿಂದ : -**

ವಾದಿ ಈ ದಾವೆಯನ್ನು ಮನೆಗೆ ಓಡಾಡಲು ಜಾಗ ಬೇಕು ಎಂದು ಹೂಡಿರುತ್ತಾರೆ. ನ್ಯಾಯಾಲಯಕ್ಕೆ ಹಾಕಿರುವ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಪ್ರಮಾಣಪತ್ರದಲ್ಲಿರುವ ವಿಳಾಸಕ್ಕೆ ನಾನು ಬಂದು ಒಂದು ವರ್ಷ ಆಗಿರುತ್ತದೆ. ಒಂದು ವರ್ಷಕ್ಕಿಂತ ಮೊದಲು ನಾನು ಅದೇ ವಿಳಾಸದ ರಸ್ತೆಯಲ್ಲಿರುವ ಪಕ್ಕದ ರಸ್ತೆಯಲ್ಲಿ ವಾಸ ಮಾಡುತ್ತಿದ್ದೆ. ವಾದಿಯವರು ಮಾಡಿಕೊಂಡಿರುವ ಕ್ರಯಪತ್ರವನ್ನು ನಾನು ನೋಡಿರುತ್ತೇನೆ. ವಾದಿಯವರ ಕ್ರಯಪತ್ರದಲ್ಲಿ ದಕ್ಷಿಣಕ್ಕೆ 3 1/4 ಅಡಿಗೆ 35 ಅಡಿ ಪ್ಯಾಸೇಜ್ ಇದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ನಾನು ನನ್ನ ಸ್ವಂತ ತಿಳುವಳಿಕೆಯಿಂದ ಈ ಪ್ರಮಾಣಪತ್ರವನ್ನು ತಯಾರಿಸಲು ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ವಾದಿಯವರು ಈ ನ್ಯಾಯಾಲಯದಲ್ಲಿ 3 1/4 ಅಡಿಗೆ 35 ಅಡಿ ಪ್ಯಾಸೇಜ್ ಇದೆ ಎಂದು ಏನು ಹೇಳುತ್ತಿದ್ದಾರೋ ಅದೇ ಪ್ಯಾಸೇಜ್ ಮುಖಾಂತರ ನಾನು ಈ ದಿನ ನಡೆದುಕೊಂಡು ಬಂದಿರುತ್ತೇನೆ ಎಂದರೆ ಸರಿ. ಸದರಿ ಪ್ಯಾಸೇಜ್ ನಲ್ಲಿ ನಡೆದುಕೊಂಡು ಬರಲು ನನಗೆ ಯಾವುದೇ ತೊಂದರೆ ಆಗಿರುವುದಿಲ್ಲ. 3 1/4 ಅಡಿಗೆ 35 ಅಡಿ ಪ್ಯಾಸೇಜ್ ವಾದಿಗೂ ಮತ್ತು ಪ್ರತಿವಾದಿ ನಂ.೪ ರವರಿಗೂ ಉಪಯೋಗಿಸಿಕೊಳ್ಳಲು ಬಿಟ್ಟಿರುವ ಪ್ಯಾಸೇಜ್ ಆಗಿರುತ್ತದೆ ಎಂದರೆ ಸರಿ. ವಾದಿ ದಾವಾ ಆಸ್ತಿ ಖರೀದಿಸಿರುವ ವಿಷಯ ನನಗೆ ತಿಳಿದಿರುತ್ತದೆ. ಪ್ರತಿವಾದಿ ನಂ.೪ ರವರು ಪ್ರತಿವಾದಿ ನಂ.1 ರಿಂದ 3 ರವರಿಂದ ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಬರುವ ಆಸ್ತಿಯನ್ನು ಖರೀದಿಸಿರುವ ಬಗ್ಗೆ ನನಗೆ ತಿಳಿದಿರುತ್ತದೆ. ಕೃಷ್ಣಮೂರ್ತಿ ಯವರು ಕಟ್ಟಿಸಿದ ಕಟ್ಟಡವನ್ನೇ ವಾದಿ ಮತ್ತು ಪ್ರತಿವಾದಿ ನಂ.೪ ರವರು ಖರೀದಿಸಿರುತ್ತಾರೆ ಎಂದರೆ ಸರಿ. ಜಿ.ಎಸ್.ಕೃಷ್ಣಮೂರ್ತಿ ರವರು ಕಟ್ಟಿಸಿದ ಕಟ್ಟಡದಲ್ಲೇ ಪ್ರತಿವಾದಿ ನಂ.೪ ರವರು ಪ್ರಸ್ತುತ ವಾಸವಿರುತ್ತಾರೆ ಎಂದರೆ ಸರಿ.

ಪ್ರತಿವಾದಿ ನಂ.೧ ರವರ ಪರಿಚಯವಿರುತ್ತದೆ. ಪ್ರತಿವಾದಿ ನಂ.೧ ವಾದಿಯ ಅಕ್ಕನ ಮಗಳು ಆಗಬೇಕು ಎಂದರೆ ಸರಿ. ಪ್ರತಿವಾದಿ ನಂ.೪ ರವರು ಕಟ್ಟಡವನ್ನು ಕೊಂಡುಕೊಳ್ಳುವ ಮುನ್ನ ಪ್ರತಿವಾದಿ ನಂ.೧ ಆ ಕಟ್ಟಡದಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಪ್ರತಿವಾದಿ ನಂ.೧ ಹಣಕಾಸಿನ ತೊಂದರೆ ಇದ್ದಿದ್ದರಿಂದ ಸದರಿ ಕಟ್ಟಡವನ್ನು ಮಾರಾಟ ಮಾಡಲು ಇಟ್ಟಿದ್ದರು ಎಂದರೆ ಸರಿ. ಪ್ರತಿವಾದಿ ನಂ.೧ ರವರು ಮಾರಾಟ ಮಾಡಲು ಇಟ್ಟಿರುವ ಕಟ್ಟಡವನ್ನು ನನಗೆ ಮಾರಾಟ ಮಾಡು ಎಂದು ವಾದಿ ಪ್ರತಿವಾದಿ ನಂ.೧ ರವರನ್ನು ಕೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.೪ ರವರಿಗೆ ಯಾವಾಗ ಕಟ್ಟಡವನ್ನು ೧ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ, ಅಂದಿನಿಂದಲೂ ವಾದಿ ೪ನೇ ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದರು ಎಂದರೆ ಗೊತ್ತಿಲ್ಲ. ನನ್ನ ಪ್ರಮಾಣಪತ್ರದಲ್ಲಿ ದಾವಾ ಆಸ್ತಿಯ ಪ್ಯಾಸೇಜ್ ನಲ್ಲಿ ಓಡಾಡಲು ತೊಂದರೆ ಇದೆ ಎಂದು ಬರೆಸಿರುತ್ತೀರಾ, ಯಾರಿಂದ ತಿಳಿಯಿತು ಎಂದರೆ ಸಾಕ್ಷಿಯು, ಸದರಿ ಪ್ಯಾಸೇಜ್ ವಿಷಯಕ್ಕೆ ಗಲಾಟೆ ಆಗುತ್ತಿದ್ದರಿಂದ ಓಡಾಡಲು ತೊಂದರೆ ಆಗುತ್ತಿದೆ ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

4 ನೇ ಪ್ರತಿವಾದಿ ಮಾಡಿಕೊಂಡಿರುವ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ. ನನ್ನ ಪ್ರಮಾಣಪತ್ರದ ಪ್ಯಾರಾ ನಂ.7 ರಲ್ಲಿ ಪ್ಯಾಸೇಜ್ ಅನ್ನು ಸೇರಿಸಿ, ಕ್ರಯಪತ್ರನವನ್ನು ಪ್ರತಿವಾದಿ ನಂ.೪ ರವರು ಮಾಡಿಕೊಂಡಿರುತ್ತಾರೆ ಎಂದು ಹೇಳಿರುತ್ತೀರಾ ಎಂದರೆ ಸರಿ. ಯಾವ ದಾಖಲೆಯನ್ನು ನೋಡಿ ಮೇಲೆ ಹೇಳಿದ ರೀತಿ ಪ್ರಮಾಣಪತ್ರದಲ್ಲಿ ಬರೆಸಿರುತ್ತೀರಾ ಎಂದರೆ ಸಾಕ್ಷಿಯು 4 ನೇ ಪ್ರತಿವಾದಿ ರವರ ದಾಖಲೆಯನ್ನು ನೋಡಿ, ಆ ರೀತಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ದಾಖಲೆಯೆಂದು ನನಗೆ ನೆನಪಿರುವುದಿಲ್ಲ. 4 ನೇ ಪ್ರತಿವಾದಿಯವರು ಒಂದು ತಿದ್ದುಪಡಿ ಪತ್ರವನ್ನು ಮಾಡಿಕೊಂಡಿರುವ ವಿಷಯ ನನಗೆ ತಿಳಿದಿರುವುದಿಲ್ಲ. ವಾದಿಯ **3 1/4** ಅಡಿಗೆ **35** ಅಡಿ ಪ್ಯಾಸೇಜ್ ಗೆ ಪ್ರತಿವಾದಿ ನಂ.೪ ರವರಿಂದ ಯಾವುದೇ ತೊಂದರೆ ಆಗಿರುವುದಿಲ್ಲ ಎಂದರೆ ಸರಿ.

ವಾದಿಯರ ಮನೆಯಲ್ಲಿ ನಾನು ಬಾಡಿಗೆಗೆ ಇರುತ್ತೇನೆ. ನಾನು ಬಾಡಿಗೆ ಕರಾರುಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ಹಿಂದೆ ಕೃಷ್ಣಮೂರ್ತಿರವರು ಹೊರಗಡೆ ಕಟ್ಟಿಸಿರುವ ಗೋಡೆ ಯಥಾವತ್ ಆಗಿ ಇರುತ್ತದೆ ಎಂದರೆ ಸರಿ. ಪೂರ್ವಕ್ಕೆ

ವಾದಿಯರ ಮನೆ ಇರುತ್ತದೆ. ಪಶ್ಚಿಮಕ್ಕೆ 4ನೇ ಪ್ರತಿವಾದಿಯ ಮನೆ ಇರುತ್ತದೆ. ಎರಡರ ಮಧ್ಯ ೪ನೇ ಪ್ರತಿವಾದಿಯ ಓಡಾಡಲು ಪ್ಯಾಸೇಜ್ ಇರುತ್ತದೆ ಎಂದರೆ ಸರಿ. ನಾನು ವಾದಿಯ ಮನೆಯಲ್ಲಿ ಬಾಡಿಗೆ ಇರುವುದರಿಂದ ವಾದಿಗೆ ಸಹಾಯ ಆಗಲೀ ಎಂದು ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ವಾದಿಯವರು ಕೊಂಡುಕೊಂಡಿರುವ ಸೈಟ್ ಅಳತೆಯ ಪೂರ್ತಿಯಾಗಿ ಜಿ.ಎಸ್.ಕೃಷ್ಣಮೂರ್ತಿಯವರು ಕಟ್ಟಡವನ್ನು ಕಟ್ಟಿದ್ದರು ಎಂದರೆ ಸರಿ. ಕಟ್ಟಡ ಕಟ್ಟುವ ಸಮಯದಲ್ಲಿ ಸದರಿ ಜಿ.ಎಸ್.ಕೃಷ್ಣಮೂರ್ತಿಯವರು ಯಾವುದೇ ಪ್ಯಾಸೇಜ್ ಬಿಟ್ಟಿರಲಿಲ್ಲ ಎಂದರೆ ಸರಿ ಎಂದು ನುಡಿಯುತ್ತಾರೆ.

**<u>ಮರುವಿಚಾರಣೆ ಇಲ್ಲ.</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**